**ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ (ಪಿಎಂಎಸ್‌ಬಿವೈ) ಸಂಬಂಧಿಸಿದಂತೆ ಪ್ರಶ್ನೆಗಳು**

**ಪ್ರಶ್ನೆ 1 : ಈ ಯೋಜನೆಯ ಸ್ವರೂಪವೇನು?**

ಈ ಯೋಜನೆಯು ಒಂದು ವರ್ಷ ಅವಧಿಯ ವೈಯಕ್ತಿಕ ಅಪಘಾತ ವಿಮಾ ಯೋಜನೆಯಾಗಿರುತ್ತದೆ. ಪ್ರತಿ ವರ್ಷವೂ ನವೀಕರಣಗೊಳಿಸಬಹುದಾಗಿದ್ದು, ಅಪಘಾತದಿಂದ ಸಂಭವಿಸಬಹುದಾದ ಮರಣ ಅಥವಾ ಅಂಗವಿಕಲತೆಯ ವಿರುದ್ಧ ರಕ್ಷಣೆ ಒದಗಿಸುತ್ತದೆ.

**ಪ್ರಶ್ನೆ 2 : ಈ ಯೋಜನೆಯ ಅಡಿಯಲ್ಲಿ ಬರಬಹುದಾದ ಅನುಕೂಲತೆಗಳೇನು ಮತ್ತು ಪಾವತಿ ಮಾಡಬೇಕಾದ ಪ್ರೀಮಿಯಂ ಮೊತ್ತವೇನು?**
**ಸೌಲಭ್ಯಗಳು ಈ ಕೆಳಕಂಡಂತೆ ಇರುತ್ತವೆ.**

| | ಸೌಲಭ್ಯಗಳ ತಃಖ್ತೆ | ವಿಮಾ ಮೊತ್ತ |
|---|---|---|
| ಎ. | ಮರಣ | ರೂ.2 ಲಕ್ಷಗಳು |
| ಬಿ. | ಎರಡೂ ಕಣ್ಣುಗಳು ಸಂಪೂರ್ಣ ಅಂಧತ್ವ ಅಥವಾ ಎರಡೂ ಕೈ ಅಥವಾ ಕಾಲುಗಳನ್ನು ಉಪಯೋಗಿಸಲು ಅಸಮರ್ಥ ಅಥವಾ ಒಂದು ಕಣ್ಣಿನ ದೃಷ್ಟಿ, ಒಂದು ಕಾಲು ಅಥವಾ ಒಂದು ಕೈ ಅಸಮರ್ಥತೆ | ರೂ.2 ಲಕ್ಷಗಳು |
| ಸಿ | ಒಂದು ಕಣ್ಣಿನ ಸಂಪೂರ್ಣ ದೃಷ್ಟಿ ನಾಶ ಅಥವಾ ಒಂದು ಕೈ ಅಥವಾ ಕಾಲಿನ ಶಾಶ್ವತ ವೈಕಲ್ಯತೆ | ರೂ.1 ಲಕ್ಷ |

ಪ್ರತಿ ಸದಸ್ಯರು ವಾಷಿಕ ರೂ.12/- ರಂತೆ ಪ್ರೀಮಿಯಂ ಪಾವತಿ ಮಾಡಬೇಕಾಗಬಹುದು .

**ಪ್ರಶ್ನೆ 3 : ಪ್ರೀಮಿಯಂ ಹಣವನ್ನು ಪಾವತಿ ಮಾಡುವ ವಿಧಾನವೇನು?**

ನೋಂದಣಿ ಮಾಡುವ ಸಮಯದಲ್ಲಿ ನೀಡಿರುವ ಒಪ್ಪಿಗೆಯ ಆಧಾರದಲ್ಲಿ ಆಟೋ ಡೆಬಿಟ್ ವ್ಯವಸ್ಥೆಯಲ್ಲಿ ಒಂದೇ ಕಂತಿನಲ್ಲಿ ಖಾತೆದಾರರ ಬ್ಯಾಂಕ್ ಖಾತೆಯಿಂದ ಕಡಿತಗೊಳಿಸಲಾಗುವುದು. ಸದರಿ ಯೋಜನೆಯು ಜಾರಿಯಲ್ಲಿರುವವರೆಗೆ ಯೋಜನೆಯ ಅನುಭವದ ಮೇಲೆ ಅಗತ್ಯ ಬದಲಾವಣೆ ತರುವುದನ್ನು ಒಳಗೊಂಡು ಆಟೊಡೆಬಿಟ್ ಆಧಾರದಲ್ಲಿ ಪ್ರತಿವರ್ಷ ಪಾವತಿ ಮಾಡುವಂತೆ ಒಂದು ಬಾರಿಯ ಹುಕುಂ ನೀಡುವ ಅವಕಾಶ ಸದಸ್ಯರಿಗಿದೆ.

**ಪ್ರಶ್ನೆ 4 : ಯಾರು ಈ ಯೋಜನೆಯನ್ನು ಜಾರಿಗೆ ತರುತ್ತಾರೆ / ಪರಿಚಯಿಸುವವರು ಯಾರು?**

ಸದರಿ ಯೋಜನೆಯು ಸಾರ್ವಜನಿಕ ರಂಗದ ಸಾಮಾನ್ಯ ವಿಮಾ ಕಂಪನಿಗಳ (PSGIC) ಮುಖಾಂತರ ಪರಿಚಯಿಸಿದ್ದು/ಜಾರಿಗೆ ತರಲಾಗಿದೆ ಮತ್ತು ಇತರೆ ಯಾವುದೇ ವಿಮಾ ಕಂಪನಿಯವರು ಈ ಯೋಜನೆಯನ್ನು ಪರಿಚಯಿಸಲು ಇಚ್ಛಿಸಿದಲ್ಲಿ, ಇತರ ಬ್ಯಾಂಕುಗಳ ಜೊತೆಗೂಡಿ ಅಗತ್ಯವಾದ ಅನುಮತಿಯನ್ನು ಪಡೆದು ಜಾರಿಗೆ ತರುವುದು. ಇದರಲ್ಲಿ ಪಾಲ್ಗೊಳ್ಳುವ ಬ್ಯಾಂಕುಗಳು ತಮ್ಮ ಇಚ್ಛಾನುಸಾರ ಯಾವುದೇ ವಿಮಾ ಕಂಪನಿಯನ್ನು ತಮ್ಮ ಗ್ರಾಹಕರಿಗೆ ಈ ಯೋಜನೆಯನ್ನು ಒದಗಿಸಲು ನೇಮಕ ಮಾಡಿಕೊಳ್ಳಬಹುದು.

**ಪ್ರಶ್ನೆ 5 : ಈ ಯೋಜನೆಗೆ ಯಾರು ಅರ್ಹರಾಗುತ್ತಾರೆ?**

18 ರಿಂದ 70 ವರ್ಷ ವಯಸ್ಸಿನ ಯಾವುದೇ ಪ್ರತ್ಯೇಕ (ಜಂಟಿ ಅಥವಾ ವೈಯಕ್ತಿಕ) ಖಾತೆದಾರರು ಈ ಯೋಜನೆಗೆ ಅರ್ಹರಾಗಿರುತ್ತಾರೆ. ಒಂದು ವೇಳೆ ಯಾವುದೇ ವ್ಯಕ್ತಿಯು ಒಂದಕ್ಕಿಂತ ಹೆಚ್ಚಿನ ಬ್ಯಾಂಕುಗಳಲ್ಲಿ ಬಹುಖಾತೆಗಳನ್ನು ಹೊಂದಿದ್ದಲ್ಲಿ, ಅಂತಹವರು ಯಾವುದಾದರೂ ಒಂದು ಬ್ಯಾಂಕಿನಲ್ಲಿ ಒಂದು ಖಾತೆಯ ಮೂಲಕಮಾತ್ರ ಈ ಯೋಜನೆಗೆ ಅರ್ಹರಾಗಿರುತ್ತಾರೆ.

**ಪ್ರಶ್ನೆ 6 : ನೋಂದಣಿಯ ಅವಧಿ ಮತ್ತು ಮಾದರಿ?**

ಪ್ರಾರಂಭದಲ್ಲಿ ಈ ಯೋಜನೆಯನ್ನು ಪ್ರಾರಂಭಿಸುವಾಗ ಅವಧಿಯು 1ನೇ ಜೂನ್ 2015 ರಿಂದ 31ನೇ ಮೇ 2016 ರವರೆಗೆ ಆಗಿದ್ದು, ಫಲಾನುಭವಿಗಳು ತಮ್ಮ ಆಟೋ ಡೆಬಿಟ್‌ಗಾಗಿ ದಿನಾಂಕ: 31ನೇ ಮೇ 2015 ರವರೆಗೆ ನೊಂದಾಯಿಸಬಹುದಾಗಿತ್ತು , ಈ ಕಾಲಾವಕಾಶವನ್ನು 31ನೇ ಆಗಸ್ಟ್ 2015 ರವರೆಗೂ ವಿಸ್ತರಿಸಲಾಗಿದೆ. ಈ ಅವಧಿಯು ಮುಗಿದ ನಂತರದ ನೋಂದಣಿಯು ನಿಗದಿಪಡಿಸಿದ ಷರತ್ತುಗಳಿಗೆ ಒಳಪಟ್ಟು ವಾರ್ಷಿಕಮೊತ್ತವನ್ನು ಪೂರ್ಣವಾಗಿ ಪಾವತಿಮಾಡುವಾದರ ಮೂಲಕ ಸಾಧ್ಯವಾಗುತ್ತದೆ . ಮೊದಲ ವರ್ಷದ ನಂತರವೂ ಈ ಯೋಜನೆಯಲ್ಲಿ ಮುಂದುವರೆಯಲು ಇಚ್ಛಿಸುವ ಫಲಾನುಭವಿಗಳು ಆಯಾ ವರ್ಷದ ಮೇ 31ರ ಒಳಗಾಗಿ ಆಟೋ ಡೆಬಿಟ್‌ಗಾಗಿ ಸಮ್ಮತಿ ನೀಡುವುದು. ತಡವಾದ ನವೀಕರಣವು ನಿಗದಿಪಡಿಸಿದ ಷರತ್ತುಗಳಿಗೆ ಒಳಪಟ್ಟು ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಪಾವತಿ ಮಾಡಿದಲ್ಲಿ ಸಾಧ್ಯವಾಗುವದು.

**ಪ್ರಶ್ನೆ 7 : ಒಂದು ವೇಳೆ ಪ್ರಾರಂಭಿಕ ವರ್ಷದಲ್ಲಿ ನೋಂದಣಿ ಮಾಡಿಕೊಳ್ಳಲು ತಪ್ಪಿದ ಫಲಾನುಭವಿಗಳು ಮುಂದಿನ ವರ್ಷಕ್ಕೆ ಅರ್ಹರಾಗುತ್ತಾರೆಯೇ?**

ಹೌದು. ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಆಟೋಡೆಬಿಟ್ ಮೂಲಕ ಪಾವತಿ ಮಾಡಿದಲ್ಲಿ ಸಾಧ್ಯವಾಗುವುದು ಮತ್ತು ಮುಂದಿನ ವರ್ಷಗಳಲ್ಲಿಯೂ ಸಹ ಹೊಸದಾಗಿ ನೋಂದಣಿ ಮಾಡಿಕೊಳ್ಳಬಯಸುವವರು ಅದೇ ರೀತಿ ನೋಂದಣಿಮಾಡಿಕೊಳ್ಳಬಹುದು.

**ಪ್ರಶ್ನೆ : 8 : ಈ ಯೋಜನೆಯಿಂದ ಹೊರಬಂದಿರುವ ಫಲಾನುಭವಿಗಳು ಪುನಃ ಸೇರಿಕೊಳ್ಳಬಹುದೇ?**

ಈ ಯೋಜನೆಯಿಂದ ಯಾವುದೇ ಸಂದರ್ಭದಲ್ಲಿ ಹೊರಬಂದಿರುವ ಯಾವುದೇ ಫಲಾನುಭವಿಯೂ ಸಹ ನಿಗದಿಪಡಿಸಿದ ನಿಬಂದನೆಗಳಿಗೆಒಳಪಟ್ಟು ವಾರ್ಷಿಕ ಮೊತ್ತವನ್ನು ಪೂರ್ಣವಾಗಿ ಪಾವತಿ ಮಾಡಿದಲ್ಲಿ ಸಾಧ್ಯವಾಗುವುದು.

**ಪ್ರಶ್ನೆ 9 : ಈ ಯೋಜನೆಯಲ್ಲಿ ಯಾರು ಮಾಸ್ಟರ್ ಪಾಲಿಸಿದಾರರಾಗುತ್ತಾರೆ.**

ಈ ಯೋಜನೆಯಲ್ಲಿ ಪಾಲ್ಗೊಳ್ಳುವ ಬ್ಯಾಂಕುಗಳು ಮಾಸ್ಟರ್ ಪಾಲಿಸಿದಾರರಾಗಿರುತ್ತಾರೆ. ಸಾರ್ವಜನಿಕ ರಂಗದ ಸಾಮಾನ್ಯ ವಿಮಾ ಕಂಪನಿ (ಪಿ.ಎಸ್ ಜಿ.ಐ ಸಿ ) / ಯಾವುದೇ ಆಯ್ಕೆಯಾದ ವಿಮಾ ಕಂಪನಿಯವರು ಪಾಲ್ಗೊಳ್ಳುವ ಬ್ಯಾಂಕಿನ ಜೊತೆ ಚರ್ಚಿಸಿ ಸರಳ ಮತ್ತು ಚಂದಾದಾರ ಸ್ನೇಹಿ ಆಡಳಿತ ಮತ್ತು ಕ್ಲೇಮ್ ಸೆಟಲ್‌ಮೆಂಟ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ .

**ಪ್ರಶ್ನೆ 10 : ಯಾವ ಸಂದರ್ಭದಲ್ಲಿ ಸದಸ್ಯರ ವಿಮೆಯು ಮುಕ್ತಾಯಗೊಳ್ಳುತ್ತದೆ.**

ಈ ಕೆಳಕಂಡ ಯಾವುದಾದರೂ ಒಂದು ಸಂದರ್ಭದಲ್ಲಿ ಸದಸ್ಯರ ವಿಮಾ ಯೋಜನೆಯು ಮುಕ್ತಾಯಗೊಳ್ಳುತ್ತದೆ.

(1) 70 ವರ್ಷ ವಯಸ್ಸಾದ ನಂತರ (ಹತ್ತಿರದ ಜನ್ಮ ದಿನಾಂಕದಂದು),
(2) ಬ್ಯಾಂಕಿನ ಖಾತೆಯನ್ನು ಮುಕ್ತಾಯಗೊಳಿಸಿದಲ್ಲಿ ಅಥವಾ ವಿಮೆಯನ್ನು ಜಾರಿಯಲ್ಲಿಡಲು ಅವಶ್ಯಕವಾದ ಮೊತ್ತ ಇಲ್ಲದಿದ್ದಲ್ಲಿ.
(3) ಒಂದು ವೇಳೆ ಫಲಾನುಭವಿಯು ಒಂದಕ್ಕಿಂತ ಹೆಚ್ಚಿನ ಖಾತೆಯನ್ನು ಹೊಂದಿ,ವಿಮಾ ಕಂಪನಿಗಳು ಪ್ರಿಮಿಯ ೦ನ್ನು ಪಡೆದಿದ್ದರೆ ಸದರಿ ಪಾಲಿಸಿಯು ಒಂದು ಖಾತೆಗೆ ಮಾತ್ರ ಅನ್ವಯಿಸುತ್ತದೆ ಮತ್ತು ಉಳಿದ ಪ್ರೀಮಿಯಂ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

**ಪ್ರಶ್ನೆ: 11: ಬ್ಯಾಂಕ್ ಮತ್ತು ವಿಮಾ ಕಂಪನಿಯ ಪಾತ್ರವೇನು?**

(1) ಸದರಿ ಯೋಜನೆಯು ಪಿಎಸ್‌ಜಿಐಸಿ ಅಥವಾ ಇತರೆ ವಿಮಾ ಕಂಪನಿಯವರು ಇತರೆ ಯಾವುದೇ ಬ್ಯಾಂಕ್ / ಬ್ಯಾಂಕುಗಳ ಜೊತೆ ಪಾಲುದಾರಿಕೆ ಯೊಂದಿಗೆ ಜಾರಿಗೆ ತರುವುದು.
(2) ಸದರಿ ಯೋಜನೆಯಲ್ಲಿ ಭಾಗವಹಿಸುವ ಯಾವುದೇ ಬ್ಯಾಂಕು ಖಾತೆದಾರಲಿಂದ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ಖಾತೆದಾರರ ಇಚ್ಚೆಯ ಮೇರೆಗೆ ನಿಗದಿತ ಪಾವತಿ ದಿನಾಂಕದೊಳಗೆ ಆಟೋ ಡೆಬಿಟ್ ಆಧಾರದಲ್ಲಿ ಸಂಗ್ರಹ ಮಾಡಿ ಸದರಿ ಮೊತ್ತವನ್ನು ಪಿಎಸ್‌ಜಿಐಸಿ ಗೆ ವರ್ಗಾವಣೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತವೆ.
(3) ನೊಂದಣಿ ಅರ್ಜಿ / ಆಟೋ ಡೆಬಿಟ್ ಅಧಿಕಾರ ಪತ್ರ / ಒಪ್ಪಿಗೆ ಮತ್ತು ಘೋಷಣೆ ಪತ್ರ ಇವುಗಳನ್ನು ನಿಗಧಿತ ನಮೂನೆಯಲ್ಲಿ ಪಡೆದುಕೊಂಡು ತಮ್ಮಲ್ಲಿ ಇಟ್ಟುಕೊಳ್ಳುವುದು ಪಾಲ್ಗೊಳ್ಳುವ ಬ್ಯಾಂಕಿನ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಕ್ಲೈಮ್ ಇದ್ದಲ್ಲಿ ,ಪಿ.ಎಸ್ . ಜಿ.ಐ ಸಿ / ವಿಮಾ ಕಂಪನಿಯವರು ಇವುಗಳನ್ನು ಪಡೆಯಲು ಕೇಳ ಬಹುದು. ಎಲ್‌ಐಸಿ / ವಿಮಾ ಕಂಪನಿಯವರು ಈ ಎಲ್ಲಾ ದಾಖಲಾತಿಗಳನ್ನು ಯಾವುದೇ ಸಮಯದಲ್ಲಾದರೂ ಪಡೆದುಕೊಳ್ಳುವ ಹಕ್ಕು ಹೊಂದಿರುತ್ತಾರೆ.

**ಪ್ರಶ್ನೆ 12 : ಪ್ರೀಮಿಯಂ ಅನ್ನು ಯಾವ ರೀತಿ ಪರಿಗಣಿಸಲಾಗುತ್ತದೆ?**

(1) ವಿಮಾ ಪ್ರೀಮಿಯಂ ಪಿಎಸ್‌ಜಿಐಸಿ / ಇತರೆ ವಿಮಾ ಕಂಪನಿಗಳಿಗೆ : ವಾರ್ಷಿಕ ರೂ.10/- ಪ್ರತಿ ಸದಸ್ಯರಿಗೆ
(2) ಬಿಸಿ/ಮೈಕ್ರೋ/ಕಾರ್ಪೊರೇಟ್./ಏಜೆಂಟ್ ರವರ ಖರ್ಚು ಗಳನ್ನು ಭರಿಸಲು : ವಾರ್ಷಿಕ ರೂ.1/- ಪ್ರತಿ ಸದಸ್ಯರಿಗೆ
(3) ಬ್ಯಾಂಕಿಗೆ ಆಡಳಿತಾತ್ಮಕ ವೆಚ್ಚ ಭರಿಸಲು ಪ್ರತಿ ಸದಸ್ಯರಿಗೆ ರೂ.1/- ವಾರ್ಷಿಕ.

**ಪ್ರಶ್ನೆ 13 : ಈ ಯೋಜನೆಯು ಫಲಾನುಭವಿಯ ಇತರೆ ಯಾವುದೇ ವಿಮಾ ಯೋಜನೆಯ ಜೊತೆಗೆ ಹೆಚ್ಚುವರಿಯಾಗಿರುತ್ತದೆಯೇ?**
ಹೌದು.

**ಪ್ರಶ್ನೆ 14 : ಪಿಎಂಎಸ್‌ಬಿಬೈ ಯೋಜನೆಯಲ್ಲಿ ನೈಸರ್ಗಿಕ ವಿಕೋಪಗಳಾದ ಪ್ರವಾಹ, ಭೂಕಂಪ ಮತ್ತಿತರ ವಿಕೋಪಗಳಿಂದ ಉಂಟಾಗಬಹುದಾದ ಸಾವು, ಅಂಗವೈಕಲ್ಯವು ಒಳಗೊಳ್ಳುತ್ತದೆಯೇ? ಕೊಲೆ ಅಥವಾ ಆತ್ಮಹತ್ಯೆಯ ಪ್ರಕರಣದಲ್ಲಿ ಯಾವ ರೀತಿ ಅನುಸರಿಸಲಾಗುತ್ತದೆ?**

ಆತ್ಮಹತ್ಯೆಯ ಹೊರತಾಗಿ ,ಈ ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲಿಯೂ ಸಂಭವಿಸಬಹುದಾದ ಮೃತ್ಯು ಸದರಿ ಪಿಎಂಎಸ್‌ಬಿವೈ ಯೋಜನೆಯಲ್ಲಿ ಒಳಗೊಳ್ಳುತ್ತದೆ. ಕೊಲೆಯಿಂದಾಗುವ ಮರಣವೂ ಒಳಪಡುತ್ತದೆ

**ಪ್ರಶ್ನೆ 15 : ಎಲ್ಲಾ ಜಂಟಿ ಖಾತೆದಾರರು ಈ ಯೋಜನೆಯಲ್ಲಿ ಸದರಿ ಖಾತೆಯ ಮುಖಾಂತರ ನೋಂದಣಿ ಮಾಡಿಕೊಳ್ಳಬಹುದೇ?**

ಜಂಟಿ ಖಾತೆಯನ್ನು ಹೊಂದಿರುವ ಎಲ್ಲಾ ಖಾತೆದಾರರೂ ಸದಸ್ಯರಾಗಲು ಅರ್ಹತೆಗಳನ್ನು ಪೂರೈಸಿದ್ದರೆ ಈ ಯೋಜನೆಯಲ್ಲಿ ಸದಸ್ಯರಾಗಬಹುದು. ಆದರೆ ಪ್ರತಿಯೊಬ್ಬ ಸದಸ್ಯರೂ ಸಹ ವಾರ್ಷಿಕ ರೂ.12/- ಗಳ ಪ್ರೀಮಿಯಂ ಹಣವನ್ನು ಆಟೋಡೆಬಿಟ್ ಮೂಲಕ ಪಾವತಿ ಮಾಡ ಬೇಕಾಗಬಹುದು .

**ಪ್ರಶ್ನೆ 16 : ಯಾವ ಬ್ಯಾಂಕ್ ಖಾತೆಯು ಪಿಎಂಎಸ್‌ಬಿವೈ ಗೆ ಅರ್ಹರಾಗುತ್ತಾರೆ?**

ಸಂಸ್ಥೆಯ ಹೆಸರಿನಲ್ಲಿ ಖಾತೆಯನ್ನು ಹೊರತುಪಡಿಸಿ ಎಲ್ಲಾ ಬ್ಯಾಂಕಿನ ಖಾತೆದಾರರು ಪಿಎಂಎಸ್‌ಬಿವೈ ಯೋಜನೆಗೆ ಅರ್ಹರಾಗಿರುತ್ತಾರೆ.

**ಪ್ರಶ್ನೆ: 17 : ಎನ್‌ಆರ್‌ಐ ಗಳು ಸದರಿ ಪಿಎಂಎಸ್‌ಬಿವೈ ಯೋಜನೆಯ ವ್ಯಾಪ್ತಿಗೆ ಬರುತ್ತಾರೆಯೇ?**

ಭಾರತದಲ್ಲಿ ಶಾಖೆಯನ್ನು ಹೊಂದಿರುವ ಯಾವುದೇ ಬ್ಯಾಂಕಿನಲ್ಲಿ ಅರ್ಹ ಖಾತೆಯನ್ನು ಹೊಂದಿರುವ ಎನ್‌ಆರ್‌ಐ ಗಳು ಪಿಎಂಎಸ್‌ಬಿವೈ ಯೋಜನೆಗೆ ಅರ್ಹರಾಗುತ್ತಾರೆ ಮತ್ತು ಈ ಯೋಜನೆಯ ನಿಯಮ ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದು. ಆದರೆ, ಕ್ಲೇಮುಗಳ ವಿಷಯ ಬಂದಲ್ಲಿ, ಎಲ್ಲಾ ಕ್ಲೇಮು ಸೌಲಭ್ಯಗಳನ್ನು ಫಲಾನುಭವಿ /ನಾಮನಿರ್ದೇಶಿತರಿಗೆ ಭಾರತೀಯ ರೂಪಾಯಿಗಳಲ್ಲಿ ಪಾವತಿ ಮಾಡಲಾಗುವುದು.

**ಪ್ರಶ್ನೆ : 18 : ಈ ಯೋಜನೆಯಲ್ಲಿ ಯಾವುದೇ ಅಪಘಾತದ ಸಂದರ್ಭದಲ್ಲಿ ಮರಣ ಅಥವಾ ಅಂಗವಿಕಲತೆ ಉಂಟಾದಲ್ಲಿ ಆಸ್ಪತ್ರೆಯ ಚಿಕಿತ್ಸಾ ವೆಚ್ಚಗಳನ್ನು ಭರಿಸಲು ಅವಕಾಶವಿದೆಯೇ?**

ಇಲ್ಲ

**ಪ್ರಶ್ನೆ : 19 : ವಿಮಾದಾರರು ಮೃತಪಟ್ಟ ಸಂದರ್ಭದಲ್ಲಿ ಯಾರು ಸದರಿ ವಿಮಾ ಮೊತ್ತವನ್ನು ಪಡೆದುಕೊಳ್ಳಲು ಅರ್ಹರಾಗುತ್ತಾರೆ?**

ಒಂದು ವೇಳೆ ವಿಮಾದಾರರು ಮೃತಪಟ್ಟಲ್ಲಿ ನೋಂದಣಿ ಫಾರಂನಲ್ಲಿ ನಮೂದು ಮಾಡಿರುವ ನಾಮಿನಿದಾರರು/ ನೇಮಕ ಮಾಡಿದ ವ್ಯಕ್ತಿಗಳು ಕ್ಲೇಮ್ ಮೊತ್ತವನ್ನು ಪಡೆದುಕೊಳ್ಳಬಹುದು. ಒಂದು ವೇಳೆ ನೋಂದಣಿ ಫಾರಂನಲ್ಲಿ ನಾಮಿನಿದಾರರ ಹೆಸರನ್ನು ನಮೂದಿಸದೇ ಇದ್ದಲ್ಲಿ ವಿಮಾದಾರರ ವಾರಸುದಾರರು ಸದರಿ ಮೊತ್ತವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

**ಪ್ರಶ್ನೆ 20 : ಕ್ಲೇಮ್ ಮೊತ್ತವನ್ನು ಪಾವತಿ ಮಾಡುವ ವಿಧಾನವೇನು?**

ಒಂದು ವೇಳೆ ಅಂಗವೈಕಲ್ಯತೆ ಸಂಭವಿಸಿದ್ದಲ್ಲಿ, ಸದರಿ ವಿಮಾದಾರರ ಖಾತೆಗೆ ಕ್ಲೇಮು ಮೊತ್ತವನ್ನು ಜಮಾ ಮಾಡಲಾಗುವುದು, ಒಂದು ವೇಳೆ ಮೃತಪಟ್ಟಲ್ಲಿ ಸದರಿ ಮೊತ್ತವನ್ನು ವಿಮಾದಾರರ ನಾಮಿನಿ/ವಾರಸುದಾರರ ಖಾತೆಗೆ ಜಮಾ ಮಾಡಲಾಗುವುದು.

**ಪ್ರಶ್ನೆ 21 : ಒಂದು ವೇಳೆ ವಿಮಾದಾರರು ಆತ್ಮಹತ್ಯೆ ಮಾಡಿಕೊಂಡಲ್ಲಿ ವಿಮಾ ಸೌಲಭ್ಯಕ್ಕೆ ಕುಟುಂಬವು ಅರ್ಹವಾಗುತ್ತದೆಯೇ ?**

ಇಲ್ಲ.

**ಪ್ರಶ್ನೆ 22 : ವಿಮಾ ಸೌಲಭ್ಯ ಪಡೆಯಲು ಅಪಘಾತವಾದ ಸಂದರ್ಭದಲ್ಲಿ ಪೋಲೀಸ್ ಕಂಪ್ಲೇಂಟ್ ನೀಡಿ ಎಫ್.ಐ.ಆರ್. ಪಡೆದುಕೊಳ್ಳುವುದು ಅಗತ್ಯವಾಗಿದೆಯೇ?,**

ರಸ್ತೆ ರೈಲು ಮತ್ತು ಇತರೆ ವಾಹನಗಳಲ್ಲಿ ಅಪಘಾತಗಳು ಸಂಭವಿಸಿದಲ್ಲಿ ,ಮುಳುಗುವುದು, ಅಥವಾ ಸಾವು ಯಾವುದೇ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಲ್ಲಿ ಪೋಲೀಸ್‌ರವರಿಗೆ ದೂರು ನೀಡುವುದು ಅಗತ್ಯವಾಗಿದೆ. ಒಂದು ವೇಳೆ ಹಾವು ಕಚ್ಚುವುದು, ಮರದಿಂದ ಬೀಳುವುದು ಮುಂತಾದ ಪ್ರಕರಣಗಳಲ್ಲಿ ಆಸ್ಪತ್ರೆಯ ಚಿಕಿತ್ಸಾ ದಾಖಲೆಗಳ ಆಧಾರ ಅಗತ್ಯವಿರುತ್ತದೆ.

**ಪ್ರಶ್ನೆ 23: ಒಂದು ವೇಳೆ ವಿಮಾದಾರರು ಕಾಣೆಯಾಗಿದ್ದು, ಅವರ ಮರಣವು ದೃಢಪಟ್ಟಿಲ್ಲದೇ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಅವರ ವಾರಸುದಾರರು ಕ್ಲೇಮನ್ನು ಪಡೆಯಲು ಅರ್ಹರಾಗಿರುತ್ತಾರೆಯೇ?**

ವಿಮಾದಾರರ ಮರಣವು ದೃಢಪಟ್ಟಲ್ಲಿ ಮಾತ್ರ ವಿಮಾ ಕ್ಲೇಮನ್ನು ಅವರ ವಾರಸುದಾರರಿಗೆ ನೀಡಲಾಗುವುದು ಅಥವಾ ಕಾನೂನಿನ ಪ್ರಕಾರ ಕಾಣೆಯಾದ 7 ವರ್ಷಗಳ ನಂತರ ನೀಡಲಾಗುವುದು.

**ಪ್ರಶ್ನೆ 24 : ಒಂದು ವೇಳೆ ವಿಮಾದಾರನಿಗೆ ಶಾಶ್ವತವಾಗಿ ಒಂದು ಕಣ್ಣು ಅಥವಾ ಕಾಲು ಅಥವಾ ಕೈಗಳು ವೈಕಲ್ಯಗೊಳ್ಳದೆ ಭಾಗಶಃ ಅಸಮರ್ಥತೆಗೆ ಒಳಗಾದಲ್ಲಿ ಯಾವ ಸೌಲಭ್ಯ ನೀಡಲಾಗುವುದು.**

ಯಾವುದೇ ಸೌಲಭ್ಯಗಳನ್ನು ನೀಡಲಾಗುವುದಿಲ್ಲ.

**ಪ್ರಶ್ನೆ 25 : ಒಂದು ವೇಳೆ ವಿಮಾದಾರರು ಒಂದಕ್ಕಿಂದ ಹೆಚ್ಚಿನ ಬ್ಯಾಂಕಿನಲ್ಲಿ ನೋಂದಣಿ ಮಾಡಿದ್ದಲ್ಲಿ ಮತ್ತು ಪ್ರೀಮಿಯಂ ಅನ್ನು ಪಾವತಿ ಮಾಡುತ್ತಿದ್ದಲ್ಲಿ ಖಾತೆದಾರರು ಕ್ಲೈಂನ್ನು ಪಡೆದುಕೊಳ್ಳಬಹುದೇ?**

ಇಲ್ಲ, ವಿಮಾದಾರರು/ನಾಮಿನಿದಾರರು ಕೇವಲ ಒಂದು ಕ್ಲೇಮ್‌ಗಾಗಿ ಮಾತ್ರ ಅರ್ಹರಾಗಿರುತ್ತಾರೆ.

**ಪ್ರಶ್ನೆ 26 : ಪಿಎಂಎಸ್‌ಬಿವೈ ಪಾಲಿಸಿಗಳು ವಿದೇಶಿ ವಿಮಾ ಕಂಪನಿಗಳ ಜೊತೆಯಲ್ಲಿ ಸೇರಿ ಸೇವೆಯನ್ನು ಒದಗಿಸುತ್ತವೆಯೇ?**

ಯಾವುದೇ ವಿದೇಶಿ ವಿಮಾ ಕಂಪನಿಗಳು ಭಾರತದಲ್ಲಿ ನೇರವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ವಿಮಾ ಕಾಯ್ದೆ ಮತ್ತು ಐಆರ್‌ಡಿಎ ನಿಯಮಾವಳಿಗಳ ಪ್ರಕಾರ ಕೆಲವು ವಿದೇಶಿವಿಮಾ ಕಂಪನಿಗಳು ಇತರೆ ಭಾರತೀಯ ಕಂಪನಿಗಳ ಜೊತೆಯಲ್ಲಿ ಸಹಭಾಗಿತ್ವದಲ್ಲಿ ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ಅವರ ಪಾಲು ಶೇ.49%ಕ್ಕ ಸೀಮಿತವಾಗಿರುತ್ತದೆ.

**. ಪ್ರಶ್ನೆ 27: ಪಿಎಂಎಸ್‌ಜಿವೈ ಯೋಜನೆಯು ಅತಿ ದೊಡ್ಡಮಟ್ಟದಲ್ಲಿ ಪ್ರಚುರಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟ ಮಾಡಿ ಇದರಿಂದ ಲಾಭವನ್ನು ಭಾರತೀಯ ವಿಮಾ ಕಂಪನಿಗಳ ಜೊತೆಯಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸುವ ವಿದೇಶಿ ವಿಮಾ ಕಂಪನಿಗಳಿಗೆ ಮಾಡಿಕೊಡುವ ಉದ್ದೇಶವೇ?**

ಕೇವಲ ಭಾರತೀಯ ಕಂಪನಿಗಳು ಮಾತ್ರ ವಿಮಾ ಕಾಯ್ದೆಯಲ್ಲಿ ತಿಳಿಸಿರುವಂತೆ ಭಾರತದಲ್ಲಿ ಕಾರ್ಯ ನಿರ್ವಹಿಸಬಹುದು. ಎಲ್ಲಾ ವಿಮಾ ಕಂಪನಿಗಳೂ ಸಹ 49% ಸಹಭಾಗಿತ್ವ ಹೊಂದಿರುವ ವಿದೇಶಿ ಕಂಪನಿಗಳೂ ಸಹ ಭಾರತದಲ್ಲಿ ಮಾತ್ರ ವ್ಯವಹಾರ ಮಾಡಲು ಅವಕಾಶವಿದೆಯೇ ಹೊರತು ಹೊರದೇಶದಲ್ಲಿ ಅಲ್ಲ. ಪಿಎಂಎಸ್ ಜಿವೈ ಯೋಜನೆಯಲ್ಲಿ ಪಡೆದುಕೊಳ್ಳಲಾಗುವ ಪ್ರೀಮಿಯಂ ಮೊತ್ತವನ್ನು ಎಲ್ಲ ನಷ್ಟವುಂಟುಮಾಡುವ ಅಂಶಗಳು,ಪ್ರಚಲಿತ ಸಾವಿನ ಪ್ರಮಾಣ ಮತ್ತು ಪ್ರತಿಕೂಲ ಆಯ್ಕೆಗಳನ್ನು ವಾಸ್ತವಿಕವಾಗಿ ಲೆಕ್ಕಾಚಾರದೊಂದಿಗೆ ನಿಗಡಿಗೊಳಿಸಲಾಗುತ್ತದೆ. ಆದ್ದರಿಂದ ಹೆಚ್ಚಿನ ಲಾಭಾಂಶವನ್ನು ಕ್ರೋಢೀಕರಿಸಲು ಈ ಯೋಜನೆಯಲ್ಲಿ ಅವಕಾಶವಿಲ್ಲ. ನಿಜಾಂಶ ಎಂದರೆ ಪ್ರೇಮಿಯಮ್ ಮೊತ್ತ ಏರಿಸಲು ಬೇಡಿಕೆ ಇದೆ.

**ಪ್ರಶ್ನೆ 28 : ಪಿ.ಎಸ್.ಜಿ.ಐ ಸಿ ಕಂಪನಿ ಗಳು ಸರ್ಕಾರದ ಸಂಸೆಗಳಾಗಿದ್ದು , ಸರ್ಕಾರದಿಂದ ಘೋಷಿಸಲ್ಪಟ್ಟ ಪಿಎಂಎಸ್‌ಬಿವೈ ಯೋಜನೆಯನ್ನು ತಾವೇ ನಿಭಾಯಿಸಬಹುದಿತ್ತು ಆದರೆ ವಿದೇಶಿ ವಿಮಾ ಕಂಪನಿಗಳು ಪಿಎಂಎಸ್‌ಬಿವೈ ಯೋಜನೆಯಲ್ಲಿ ಭಾಗಿಯಾಗಿರುವುದರ ಔಚಿತ್ಯವೇನು ?**

ಭಾರತದಲ್ಲಿ 21 ,ಸಾಮಾನ್ಯ ವಿಮಾ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಇವರುಗಳು ಭಾರತದಲ್ಲಿ ವ್ಯವಹಾರ ನಡೆಸಲು ಐಆರ್‌ಡಿಎಐ ನಿಂದ ಅನುಮೋದನೆ ಪಡೆದುಕೊಂಡಿರುತ್ತಾರೆ. ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವಲ್ಲಿ ತಮ್ಮಲ್ಲಿ ಪೈಪೋಟಿ ನಡೆಸುವ ಸಲುವಾಗಿ ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಎಲ್ಲಾ ಅನುಮತಿಯನ್ನು ನೀಡಲಾಗಿದೆ. ಅಲ್ಲದೆ ಅವುಗಳೆಲ್ಲವೂ ಭಾರತೀಯ ವಿಮಾ ಕಂಪನಿಗಳಾಗಿರುತ್ತವೆ. ಯಾವುದಾದರೂ ವಿದೇಶಿ ಕಂಪನಿಗಳು ಅವರ ಜೊತೆಯಲ್ಲಿ ಸಹಭಾಗಿತ್ವವನ್ನು ಹೊಂದಿದ್ದಲ್ಲಿ ಕೇವಲ 49% ಮಾತ್ರ. ಆದರೂ ಸಹ ಸಾರ್ವಜನಿಕರಂಗದ ಸಾಮಾನ್ಯ ಇನ್ಸುರೆನ್ಸ್ (ಪಿ.ಎಸ್.ಜಿ.ಐ ಸಿ ) ಕಂಪನಿಗಳು ಈ ಯೋಜನೆಯನ್ನು ಜಾರಿಮಾಡುವಲ್ಲಿ ಪ್ರಮುಖವಾದ ಕಂಪನಿ ಗಳಾ ಗಿರುತ್ತವೆ

**ಪ್ರಶ್ನೆ 29 : ಒಂದು ವೇಳೆ ಕ್ಲೇಮುಗಳ ವಿಚಾರದಲ್ಲಿ ಯಾವುದೇ ತಕರಾರುಗಳು ಇದ್ದಲ್ಲಿ ಅವುಗಳನ್ನು ಕಾನೂನಾತ್ಮಕವಾಗಿ ವಿದೇಶಿ ವಿಮಾ ಕಂಪನಿ ವಿರುದ್ಧ ಭಾರತದಲ್ಲಿ ಮುಂದುವರೆಯಲು ಸಾಧ್ಯವೇ?**

ಯಾವುದೇ ವಿದೇಶಿ ವಿಮಾ ಕಂಪನಿಗಳು ನೇರವಾಗಿ ಭಾರತದಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ನಿಯಮಾವಳಿಗಳ ಪ್ರಕಾರ ಇತರೆ ಭಾರತೀಯ ಕಂಪನಿಗಳ ಜೊತೆಯಲ್ಲಿ ಶೇ.49% ರಷ್ಟು ಸಹಭಾಗಿತ್ವ ಹೊಂದಿವೆ. ಒಂದು ಅರ್ಥದಲ್ಲಿ ಇವುಗಳೂ ಭಾರತೀಯ ಕಂಪನಿಗಳು. ಈ ಎಲ್ಲಾ ಕಂಪನಿಗಳು ಭಾರತೀಯ ಕಾನೂನಿಗೆ ಒಳಪಟ್ಟಿರುತ್ತವೆ ಮತ್ತು ಕಾನೂನಿನ ಪ್ರಕಾರ ಮುಂದುವರೆಯಲು ಯಾವುದೇ ತೊಂದರೆ ಇರುವುದಿಲ್ಲ.

**ಪ್ರಶ್ನೆ 30 : ಮುಂದಿನ ದಿನಗಳಲ್ಲಿ ಪ್ರೀಮಿಯಂ ಅನ್ನು ಹೆಚ್ಚಿಸಬಹುದು ಅಥವಾ ಕಂಪನಿಗಳು ಈ ಯೋಜನೆಯನ್ನು ನಿಲ್ಲಸಬಹುದು.**

ಇನ್ಸೂರೆನ್ಸ್ ಸಹ ಬೇರೆ ಇತರೆ ಉತ್ಪನ್ನಗಳಂತೆ. ದರಗಳು ಮುಂದಿನ ದಿನಗಳಲ್ಲಿ ಹೆಚ್ಚಾಗಬಹುದು ಈಗಾಗಲೇ 21 ಕಂಪನಿಗಳು ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವರುಗಳ ಮಧ್ಯದಲ್ಲಿ ಇರುವ ಪೈಪೋಟಿಯಿಂದ ಮೊತ್ತವು ಸ್ಥಿರವಾಗಿದೆ. ಆದರೆ ಮುಂದಿನ ದಿನಗಳಲ್ಲಿ ಪಿಎಂಎಸ್‌ಬಿಐ ನ ವಿಮಾ ವ್ಯಾಪ್ತಿ ಮತ್ತು ಪ್ರೀಮಿಯಂ ಮೊತ್ತದ ವಿಚಾರದಲ್ಲಿ ಈ ಯೋಜನೆಯು ಚ ಲಾವಣೆಯಲ್ಲಿರುತ್ತದೆ ಮತ್ತು ಯೋಜನೆ ನಿಂತು ಹೋಗುವ ಪ್ರಮೇಯ ಬಹಳ ಕಡಿಮೆ. . ಒಂದು ವೇಳೆ ನಿರ್ದಿಷ್ಟ ಕಂಪನಿಯು ಯೋಜನೆಯನ್ನು ನಿಲ್ಲಿಸಿದಲ್ಲಿ, ಬ್ಯಾಂಕುಗಳು ಸಹಭಾಗಿತ್ವ ಹೊಂದಲು ಅನೇಕ ಅವಕಾಶಗಳಿವೆ .